### ಒಂದು ಪರಿಚಯ:

# ನಾಯಕನನ್ನು ಹಿಂಬಾಲಿಸಿರಿ!

## (1 ಥೆಸಲೋನೀಕ)

ಇತರರಿಗೆ ಪ್ರಯೋಜನಕಾರಿಯಾಗಿಯೂ, ಸಹಾಯಕರಾಗಿಯೂ ಇರುವಂತ ಜೀವಿತ ವನ್ನು ಹೇಗೆ ಜೀವಿಸಬಹುದು? ಈ ಪ್ರಶ್ನೆಗೆ ಉತ್ತರವಾಗಿ ಹೊಸ ಒಡಂಬಡಿಕೆಯ ಪುಸ್ತಕಗಳು ಎರಡು ದೃಷ್ಟಿಕೋನದಿಂದ ನಮಗೆ ಸಹಾಯಿಸುತ್ತವೆ.

ಮೊದಲನೆಯದಾಗಿ, ಹೊಸ ಒಡಂಬಡಿಕೆಯು ದೇವರ ಚಿತ್ರಣವನ್ನು ನೀಡುತ್ತದೆ. ದೇವರು, ಯೇಸುವನ್ನು ನಮಗಾಗಿ ಕಳುಹಿಸಿ, ಆತನ ಭೂ ಲೋಕದ ಜೀವನ ಚರಿತ್ರೆಯನ್ನು ಸುವಾರ್ತೆಯಲ್ಲಿ ದಾಖಲು ಮಾಡಿರುವನು. ಯೇಸು ದೇವರ ತತ್ವದ ಮೂರ್ತಿಯು ಆಗಿರುವನು (ಇಬ್ರಿಯ 1:3). ಯೇಸು ಹೇಳಿರುವ ಆಲೋಚನೆಯ ಕುರಿತು, ಹಾಗೂ ಹೇಳಿದಂತವುಗಳನ್ನು ಕುರಿತು, ಮತ್ತು ಆತನು ಮಾಡಿದ ಕಾರ್ಯದ ಕುರಿತು ಮತ್ತಾಯ, ಮಾರ್ಕ, ಲೂಕ, ಹಾಗೂ ಯೋಹಾನನ, ಪುಸ್ತಕಗಳಲ್ಲಿ ದೇವರ ಆಲೋಚನೆಯನ್ನು, ದೇವರ ಮಾತುಗಳನ್ನು ದೇವರ ಕಾರ್ಯಗಳನ್ನು ನೋಡುತ್ತೇವೆ.

ಎರಡನೆಯದಾಗಿ, ಹೊಸ ಒಡಂಬಡಿಕೆಯು ದೇವ ಜನರ ಚಿತ್ರಣವನ್ನು ಸಹ ನೀಡುತ್ತದೆ. ಕರ್ತನಾದ ಯೇಸು ಕ್ರಿಸ್ತನಲ್ಲಿ ಪ್ರಕಟಗೊಂಡಿರುವ ದೇವರ ವಿಷಯವನ್ನು ಅಪೊಸ್ತಲರ ಕೃತ್ಯಗಳಲ್ಲಿ ಬೋಧಿಸಲ್ಪಟ್ಟಾಗ, ಅಲ್ಲಿನ ಜನರಲ್ಲಿ ಉಂಟಾದ ಪ್ರತಿಕ್ರಿಯೆಯನ್ನು ನಾವು ಗಮನಿಸುತ್ತೇವೆ, ಆ ಜನರು ಪ್ರತಿಕ್ರಿಯಿಸಿ, ತನಗೆ ಸ್ನೇಹಿತರಾಗುವಂತೆ ದೇವರು ಬಯಸಿದನು, ಇದು ದೇವರ ಯೋಚನೆ ಎಂದು ಸುವಾರ್ತಾ ಪ್ರಸಂಗಿಗಳು ತಿಳಿಸಿದರು (ಅಪೊಸ್ತಲಕೃತ್ಯಗಳು 17:26, 27). ಹಾಗೆಯೇ ಆ ಸ್ನೇಹವು ಯಾವ ರೀತಿಯಲ್ಲಿ ಅಸ್ತಿತ್ವಕ್ಕೆ ಬರುವದಿತ್ತು ಎಂದು ಅವರು ಬೋಧಿಸಿದರು (ಅಪೊಸ್ತಲರ ಕೃತ್ಯಗಳು 17:30). ವಿವಿಧ ಜನರ ಜನಾಂಗದ, ಸಂಸ್ಕೃತಿಯು, ಮತ್ತು ನಂಬಿಕೆಯ ಪ್ರತಿಕ್ರಿಯೆಯನ್ನು ಅಪೊಸ್ತಲರ ಕೃತ್ಯದಲ್ಲಿ ದಾಖಲೆಮಾಡಲಾಗಿದೆ. ಅವರ ಈ ನಂಬಿಕೆಯ ಪ್ರತಿಕ್ರಿಯೆಯನ್ನು ಯೇಸುವಿನ ಜೀವಿತಕ್ಕೆ ಹೋಲಿಸಲಾಗಿದೆ. ಅನೇಕರು ತಮ್ಮ ಜೀವಿತಗಳನ್ನು ಬದಲಾಯಿಸಿಕೊಳ್ಳಲು ನಿರಾಕರಿಸಿದರು, ಆದರೆ ಕೆಲವರು ದೇವರ ಸ್ನೇಹವನ್ನು ಬಯಸಿ ಕ್ರೈಸ್ತರಾದರು, ಅಪೊಸ್ತಲರ ಕೃತ್ಯಗಳವನ್ನು ಓದುವದರ ಮೂಲಕ, ಈ ದಿವಸಗಳಲ್ಲೂ, ದೇವರು ನೀಡಿರುವ ರಕ್ಷಣೆಗೆ ಪ್ರತಿಕ್ರಿಯೆ ತೋರಿಸಬಹುದು.

ದೇವರ ಸ್ವಭಾವಕ್ಕೆ ಪ್ರತಿಯಾಗಿ ಜನರು ಸ್ಪಂದಿಸಲು ಸಾಧ್ಯವಾಗಲೆಂದು, ಹೊಸ ಒಡಂಬಡಿಕೆಯಲ್ಲಿ ಅಥವಾ ಪತ್ರಿಕೆಗಳನ್ನು ಬರೆಯಲಾಗಿದೆ. ಈ ಪುಸ್ತಕಗಳ ಸಹಾಯದಿಂದ ನಮ್ಮ ಸ್ವಭಾವವನ್ನು ಮತ್ತು ಸಭೆಯಲ್ಲಿರುವ ಇತರರ ಸ್ವಭಾವವನ್ನು ಅರ್ಥಮಾಡಿಕೊಳ್ಳಬಹುದು. ಕ್ರೈಸ್ತರಾದ ನಾವು ನಮ್ಮ ಜೀವಿತದಲ್ಲಿ, ದೇವರ ಕಾರ್ಯಗಳನ್ನು ಸಿದ್ಧಾಂತಪಡಿಸುವ ಫಲ ಹಾಗೂ ಪರಿಣಾಮಗಳನ್ನು ತೋರ್ಪಡಿಸುತ್ತವೆ. ಅದು ದೇವ ಜನರ ವೈಯಕ್ತಿಕ ಮತ್ತು ಸಭೆಯ ಕಾರ್ಯವನ್ನು ಒಳಗೊಂಡಿರುತ್ತದೆ.

ಥೆಸಲೊನೀಕದಲ್ಲಿದ್ದ, ಮೆಕೆದೊನ್ಯದ ಆದಿ ಸಭೆಯ ಪ್ರಥಮ ಕ್ರೈಸ್ತರಿಗೆ, ಥೆಸಲೊನೀಕ ಪತ್ರಿಕೆಯನ್ನು ಬರೆಲಾಯಲಾಗಿದೆ. (ಈಗ ಅದನ್ನು ಸಾಲೋನಿಕ ಎಂದು ಕರೆಯುತ್ತಾರೆ) ಅದು ಗ್ರೀಕ್ ದೇಶದ ಉತ್ತರ ದಿಕ್ಕಿನಲ್ಲಿದೆ. ಪೌಲ, ಸಿಲ್ವಾನ ಮತ್ತು ತಿಮೊಥೆಯರು ಬೆರೋಯ, ಅಥೇನೆ, ಮತ್ತು ಕೊರಿಂಥವನ್ನು ಸಂಧಿಸುವ ಮೊದಲು, ಮತ್ತು ಫಿಲಿಪ್ಪಿಯಲ್ಲಿ ದೇವರ

ವಾಕ್ಯವನ್ನು ಸಾರುವ ಮೊದಲು ಥೆಸಲೊನೀಕವನ್ನು ಸಂಧಿಸಿದ್ದರು. ಥೆಸಲೊನೀಕದವರು ವಾಕ್ಯವನ್ನು ಕೇಳಬಾರದೆಂದು ಕೆಲವರು ಅಪಾರ್ಥವನ್ನು ಸೃಷ್ಟಿಸಿದ್ದರು ಸಹ, ಅವರು ದೇವರ ವಾಕ್ಯವನ್ನು ಬಹು ಸಂತೋಷದಿಂದ ಸ್ವೀಕಾರಮಾಡಿದ್ದರು (ಅಪೊಸ್ತಲರ ಕೃತ್ಯಗಳು 17:1-9). ಈ ಪ್ರಸಂಗಿಗಳು ತಾವು ಬೋಧಿಸಿ ಹಿಂದಿರುಗಿದ ನಂತರ, ತಮ್ಮ ಎರಡೂ ಪತ್ರಿಕೆಗಳಲ್ಲಿ, ಮೊದಲನೆಯ ಪತ್ರಿಕೆಯನ್ನು ಆ ಕ್ರೈಸ್ತರಿಗೆ ಬರೆದರು. ಆ ಕ್ರೈಸ್ತರು ನಂಬಿಗಸ್ತರಾಗಿದ್ದು, ದೇವರ ಮತ್ತು ಪರಸ್ಪರರ ಸಂಬಂಧದಲ್ಲಿ ಅಭಿವೃದ್ಧಿಯಾಗಬೇಕೆಂದು ಈ ಪತ್ರಿಕೆಯನ್ನು ಯೋಜಿಸಲಾಯಿತು.

ಪ್ರಸಂಗಿಗಳು ಮತ್ತು ಬೋಧಕರುಗಳ ನಮ್ಮ ಜನರೊಂದಿಗೆ, ಅದರಲ್ಲೂ ಸಹ ಕ್ರೈಸ್ತರೊಂದಿಗೆ ಬೆರೆಯುವ ಪ್ರಮುಖವಾದ ಮಾರ್ಗದರ್ಶನವನ್ನು ನೀಡುತ್ತದೆ. ಕರ್ತನನ್ನು ಅನುಸರಿಸುವದರಲ್ಲಿ, ನಮ್ಮ ಕುಟುಂಬದವರಿಗೂ ಮತ್ತು ಜೊತೆಯವರಿಗೂ ಯಾವ ರೀತಿಯಲ್ಲಿ ಸಹಕರಿಸೋಣ?

## ಯೇಸುವನ್ನು ಅನುಸರಿಸುವಲ್ಲಿ ಉಂಟಾಗಿದ್ದ ಗತಿಸಿಹೋದ ಸಾಧನೆಗಳು

ಮೊದಲನೆಯದಾಗಿ, ಜನರಲ್ಲಿ ಅಡಗಿರುವ ಉತ್ತಮವಾದ ಕಾರ್ಯಗಳನ್ನು ನೆನಪುಮಾಡಿ, ಆ ಸದ್ಗುಣಗಳ ಬೆಲೆ ಏನು ಎಂದು ಅವರು ಅರಿಯುವಂತೆ ಮಾಡಬೇಕು. ಜನರಲ್ಲಿ ಅಡಗಿರುವ ಆ ಒಳ್ಳೆ ಕಾರ್ಯಗಳೇ, ಅವರ ಭವಿಷ್ಯದ ಬುನಾದಿಯಾಗಿರ ಬೇಕು. ಜನರಿಗೆ ಸಹಾಯ ಮಾಡುವಾಗ, ಅನೇಕ ಸಾರಿ ಅವರಲ್ಲಿರುವ ಉತ್ತಮವಾದ ಕಾರ್ಯಗಳನ್ನು ಅರಿತುಕೊಳ್ಳದೆ, ಅವರನ್ನು ಹಿನ್ನೈಸುವ ಸಂಗತಿಯನ್ನು ಸಹ ನಾವು ಮಾಡುವವರಾಗುತ್ತೇವೆ. ಇತರರಲ್ಲಿರುವ ಉತ್ತಮವಾದ ಕಾರ್ಯಗಳನ್ನು ನಾವು ಒತ್ತಿ ಹೇಳಬೇಕೆಂದು ದೇವರು ಬಯಸುತ್ತಾನೆ.

1 ಥೆಸಲೊನೀಕದ ಬರಹಗಾರನು ಈ ವಿಧವಾದ ಕಾರ್ಯಗಳನ್ನೇ ಮಾಡಿರುವನು. ಅವರು ಹೊಸದಾಗಿ ಕ್ರೈಸ್ತರಾದಾಗ, ಅವರಲ್ಲಿದ್ದ ಉತ್ತಮವಾದ ಸದ್ಗುಣಗಳನ್ನು ಒತ್ತಿ ಹೇಳುವಂಥ ವಿಷಯವನ್ನೆ ಪ್ರಥಮವಾಗಿ ಪ್ರಸ್ತಾಪಿಸಿ ಈ ಪತ್ರಿಕೆಯನ್ನು ಬರೆಯಲಾಗಿದೆ. ಅವರಲ್ಲಿದ್ದಂಥ ಪರಸ್ಪರ ಸದ್ಭಾವನೆಯ ಕುರಿತು ಬರೆಯಲಾಗಿದೆ (1:6, 9, 10). ಈ ಪ್ರಮುಖವಾದ ವಿಷಯವನ್ನು ಮೂರು ಅದ್ಯಾಯಗಳಲ್ಲಿ ಪ್ರಸ್ತಾಪಿಸಲಾಗಿದೆ, ಪುಸ್ತಕದ ಅರ್ಧಭಾಗವನ್ನು ಈ ವಿಷಯಕ್ಕಾಗಿ ಬಳಸಲಾಗಿದೆ.

ಥೆಸಲೊನೀಕದವರು ದೇವರನ್ನು ಹಿಂಬಾಲಿಸುವಲ್ಲಿ ಇರುವ ಪ್ರಾಮುಖ್ಯತೆಯನ್ನು ಅರಿತವರಾಗಿ, ಸುವಾರ್ತೆಯನ್ನು ದೇವರ ವಾಕ್ಯ ಎಂಬುದಾಗಿ ನಂಬುವ ಮೂಲಕ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದರು (2:13). ಯೇಸುವಿನ ಮೂಲಕ ದೇವರ ಅನುಯಾಯಿಗಳಾಗಿದ್ದರು. ದೇವ ಜನರಲ್ಲಿದ್ದ ಸದ್ಗುಣಗಳನ್ನು ಗಮನಿಸಿ, ಅವುಗಳನ್ನು ಹಿಂಬಾಲಿಸುವದರ ಮೂಲಕ ದೇವರನ್ನು ಅನುಸರಿಸುವ ಮೂಲವನ್ನು ಕಂಡುಕೊಂಡಿದ್ದರು. ಇತರ ದೇವ ಜನರ ದೈವೀಕ ಮಾದರಿಯನ್ನು ಅನುಸರಿಸಿದ್ದರು (1:6; 2:14), ಕ್ರಿಸ್ತನನ್ನು ನಂಬುವವರೆಲ್ಲರಿಗೆ ಮಾದರಿಯಾದಿರಿ (1:7). ಹೊಸ ಕ್ರೈಸ್ತರಲ್ಲಿದ್ದ ದೈವ ಭಕ್ತಿಯ ಜೀವಿತವು, ಅವರ ಕಳೆದುಹೋದ ಕಾಲದ ಹಾಗೆ ವರ್ತಮಾನಕಾಲದ ಸಂಗತಿಗಳಿಗೆ, ಭಕ್ತಿಯ ಬೆಲೆಯು ಉಂಟಾದ್ದರಿಂದ ಆ ಸಂಗತಿಗಳನ್ನು ಬಹು ಆನಂದದಿಂದ ಸ್ವೀಕಾರಮಾಡಿದ್ದರು, ಅವುಗಳನ್ನು ಈ ಪುಸ್ತಕದಲ್ಲಿ ದಾಖಲು ಮಾಡಲಾಗಿದೆ.

ಪ್ರಸಂಗಿಗಳು ಹಾಗೂ ಉಪದೇಶಕರು ಆದವರು, ಪೋಷಕರು ಆದವರು ವಯಸ್ಕರರಿಗೆ ಮಾದರಿಯಾಗಿದ್ದು, ಕ್ರಿಸ್ತನಲ್ಲಿ ಸಹೋದರ ಸಹೋದರಿಯರಾಗಿರ ಬೇಕು ಮತ್ತು ಇತರರಲ್ಲಿ ಉತ್ತಮವಾದದ್ದನ್ನೇ ಕಂಡುಕೊಳ್ಳಬೇಕು. ಅವರಲ್ಲಿರುವ ತಲಾಂತುಗಳ ಬೆಲೆಯನ್ನು ಹಾಗೂ ಅವರ ಉತ್ತಮ ಕ್ರಿಯೆಗಳನ್ನು ಅವರುಗಳು ಅರಿಯುವಂತೆ ಸಹಾಯಿಸಬೇಕು. ಅವರಲ್ಲಿರುವ ಈ ಯಶಸ್ವಿಯನ್ನು ದೇವರು ಸಹ ಅರಿತಿರುವನೆಂಬ ತಿಳುವಳಿಕೆಯನ್ನು ಅವರಿಗೆ

ತಿಳಿಯಪಡಿಸಬೇಕು.

ಇತರರೊಂದಿಗಿನ ಸಂಬಂಧವು, ಅವರ ಬೆಳವಣಿಗೆಗೆ ಸಹಾಯಕವಾಗಿ, ಮುಂದು ವರಿಯುವಂತೆ ನೋಡಿಕೊಳ್ಳಬೇಕು. ಒಂದು ವೇಳೆ ಅವರ ಒಳ್ಳೆಯ ಕಾರ್ಯಗಳನ್ನು ಅಲಕ್ಷ್ಯ ಮಾಡಿ, ಅದನ್ನು ಗಣನೆಗೆ ಪರಿಗಣಿಸದೆ ಹೋದರೆ, ಇತರರ ಬೆಳವಣಿಗೆಗೆ ಅದು ಅಪಾಯ ಉಂಟುಮಾಡುತ್ತದೆ.

ತಮ್ಮ ಮಕ್ಕಳನ್ನು ಮೆಚ್ಚಿಕೊಳ್ಳದೆಯೂ, ಹಾಗೂ ಪ್ರೀತಿಸದೆಯೂ ಇರುವ ತಂದೆ ತಾಯಿಗಳು ಕೇವಲ ಟೀಕೆ ಮಾಡುವವರಾಗಿರುತ್ತಾರೆ. ಅದರ ಪರಿಣಾಮವೇನೆಂದರೆ, ಪೋಷಕರ ಮತ್ತು ಮಕ್ಕಳ ನಡುವಿನ ಸಂಬಂಧವು ಹಾಳಾಗಿ, ಅವರ ಸಲಹೆ ಸೂಚನೆಗಳು ಯಾವುದೇ ಪರಿಣಾಮವನ್ನು ಬೀರುವದಿಲ್ಲ. ಇನ್ನೊಂದು ವಿಧದಲ್ಲಿ ಒಂದು ವೇಳೆ ತಂದೆ ತಾಯಿಗಳ ಪ್ರೀತಿಯು ಮಕ್ಕಳಿಗೆ ಭರವಸವನ್ನು ಉಂಟುಮಾಡುವದಾದರೆ, ಮಕ್ಕಳು ಅವರ ಸಲಹೆಗಳನ್ನು ಮತ್ತು ಮಾದರಿಯನ್ನು ಹಿಂಬಾಲಿಸುವ ಸಾಧ್ಯತೆ ಇರುತ್ತದೆ, ಮಕ್ಕಳ ಮೇಲಿನ ಪ್ರೀತಿಯ ನಿಮಿತ್ತ, ತಂದೆತಾಯಿಗಳು ಅಪ್ಪಣೆಗಳನ್ನು ನೀಡುತ್ತಾರೆ ಎಂಬುದನ್ನು ಮಕ್ಕಳು ಅರಿಯಬೇಕು. ತಂದೆ ತಾಯಿಗಳು ಅಪ್ಪಣೆ ನೀಡವದನ್ನು ಪ್ರೀತಿಸುತ್ತಾರೆ, ಪೋಷಕರು ತಮ್ಮನ್ನು ಪ್ರೀತಿಸುತ್ತಾರೆ ಎಂದು ಮಕ್ಕಳು ಅರಿಯಬೇಕು.

ಅದೇ ರೀತಿಯಲ್ಲಿ, ವಯಸ್ಕರು ಸಹ, ಇತರರು ಕೇವಲ ತೀರ್ಪುಗಾರರು ಮತ್ತು ಟೀಕೆಕಾರರು ಎಂದು ತಿಳಿಯದೆ, ಅವರನ್ನು ಸ್ನೇಹಿತರು ಮತ್ತು ಸಹೋದರರು ಎಂದು ತಿಳಿದುಕೊಳ್ಳಬೇಕು, ಅವರಿಂದ ಕೇಳುವದೆಲ್ಲವೂ ಕೇವಲ ಟೀಕೆಯಾಗಿದ್ದು, ಅಥವಾ ಬೋಧಿ ಸುವವರ ಜೀವಿತದಲ್ಲಿ, ಅವರ ಬೋಧನೆಗಳು ಅಡಕವಾಗಿರಬೇಕು. ಜನ ಜೀವಿತದಲ್ಲಿರುವ ಒಳ್ಳೆಯದನ್ನು ಅರಿಯಲು ದೇವರ ವಾಕ್ಯವು ಸಹಕರಿಸುತ್ತದೆ.

ಇತರರಲ್ಲಿರುವ ಒಳ್ಳೆಯದನ್ನು ಗಮನಿಸಲು ಪ್ರಯತ್ನಿಸೋಣ. ಅವರ ಉತ್ತಮವಾದ ಕ್ರಿಯೆಗಳನ್ನು ಅವರ ಹಿಂದಿನ ಯಶಸ್ವಿಯನ್ನು ಅವರಿಂದ ಉಪಯೋಗಿಸಲ್ಪಟ್ಟ ತಲಾಂತುಗಳ ಕುರಿತಾಗಿಯೂ, ಅವರಲ್ಲಿನ ಮುಂದುವರೆದ ಸಂಬಂಧದ ಬಗ್ಗೆಯೂ, ಒತ್ತಿ ಹೇಳಬೇಕು. ಆ ಜನರ ಜೀವಿತದಲ್ಲಿರುವ ಒಳ್ಳೆಯದನ್ನೇ ನೋಡಬೇಕು, ಅವರ ಕುಟುಂಬದಲ್ಲಿನ ಸಂಬಂಧ ಅವರ ಸಭೆಯಲ್ಲಿನ ಚಟುವಟಿಕೆಗಳು, ಅವರ ದೈನಂದಿನ ಕೆಲಸದ ಕುರಿತಾಗಿಯೂ ಗಮನ ನೀಡಬೇಕು.

ಪೌಲನು, ಫಿಲಿಪ್ಪಿಯ ಸಹೋದರರನ್ನು ಉತ್ತೇಜಿಸಿ, ಯಾವುದು ಸತ್ಯವೂ, ಮಾನ್ಯವೂ, ನ್ಯಾಯವೂ, ಶುದ್ಧವೂ, ಪ್ರೀತಿಕರವೂ, ಮನೋಹರವೂ, ಯಾವುದು ಸದ್ಗುಣವಾಗಿದೆಯೋ, ಯಾವುದು ಕೀರ್ತಿಗೆ ಯೋಗ್ಯವೋ ಅವೆಲ್ಲವುಗಳನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಿರಿ ಎಂದನು (ಫಿಲಿಪ್ಪಿ 4:8). ಬೋಧನೆಯನ್ನೆ ಆಧಾರ ಮಾಡಿಕೊಂಡು, ಥೆಸಲೊನೀಕ ಕ್ರೈಸ್ತರಲ್ಲಿದ್ದ ಸಕಲ ಸದ್ಗುಣಗಳ ಬಗ್ಗೆ ಪೌಲನು ಮೆಚ್ಚುಗೆ ವ್ಯಕ್ತಪಡಿಸಿರುವನು. ಇತರರಲ್ಲಿರುವ ನಮ್ಮ ಸಂಬಂಧಕ್ಕೆ ಈ ಮಾತುಗಳೇ ಸ್ಫೂರ್ತಿದಾಯಕವಾಗಿರುತ್ತದೆ. ಇತರೆ ಉತ್ತಮ ಕ್ರಿಯೆಗಳಿಗಾಗಿ, ನಾವು ದೇವರಿಗೆ ಸ್ತೋತ್ರಸಲ್ಲಿಸಬೇಕು. ದೇವದೃಷ್ಟಿಯಲ್ಲೂ ಮತ್ತು ನಮ್ಮ ದೃಷ್ಟಿಯಲ್ಲೂ ಅವರ ಕಾರ್ಯಗಳು ಮೆಚ್ಚುಗೆಯಾಗಿವೆ ಎಂಬುದನ್ನು ಅವರಿಗೆ ಸಾಬೀತುಪಡಿಸುವಾಗ, ಅವರ ಶಿಷ್ಯತ್ವಕ್ಕೆ ಇದು ಉತ್ತೇಜನ ನೀಡುತ್ತದೆ.

## ಯೇಸುವನ್ನು ಹಿಂಬಾಲಿಸುವದರಿಂದ ಉಂಟಾಗುವ ಭವಿಷ್ಯದ ಬೆಳವಣಿಗೆ

ಕ್ರಿಸ್ತನಲ್ಲಿ ಉಂಟಾಗಬಹುದಾದ ಭವಿಷ್ಯದ ಬೆಳವಣಿಗೆಯ ಕುರಿತು ನಾವು ಇತರರಿಗೆ ಒತ್ತಿ ಹೇಳಿ ಸಹಾಯಿಸುವುದು, ಎರಡನೆಯ ಸಂಗತಿಯಾಗಿದೆ. ಲೋಕದ ಕುರಿತಾಗಿ, ದೇವರು ಹೊಂದಿರುವ ಯೋಜನೆಯಲ್ಲಿ, ನಾವು ಸಹ ಭಾಗಿಗಳಾಗಬೇಕು. ನಮ್ಮ ಜೀವಿತವನ್ನು ಆತನೇ ನಡಿಸಲಿ ಎಂದು ತಿಳುಕೊಳ್ಳುವಾಗ, ದೇವರ ಯೋಜನೆಗಳು ನಮ್ಮಲ್ಲಿ ನೆರವೇರುತ್ತವೆ.

ಅವರ ಒಳ್ಳೇಯ ಪ್ರಾರಂಭದಲ್ಲಿ, ಅಭಿವೃದ್ಧಿಯನ್ನು ಕಾಣಲು, 1 ಥೆಸಲೊನೀಕದಲ್ಲಿ ಇದೇ ಅಭಿಪ್ರಾಯವನ್ನು ಪ್ರಾಯೋಜಿಸಲಾಗಿದೆ. 4ನೇ ಅಧ್ಯಾಯವು, "ಕಡೇ ಮಾತೇನಂದರೆ" ಎಂದು ಪ್ರಾರಂಭಗೊಳ್ಳುತ್ತದೆ. ಆದರೆ ಇದು ಪತ್ರಿಕೆಯ ಅಂತ್ಯವಲ್ಲ, ಆದರೆ ಅವರಲ್ಲಿ ಈಗಾಗಲೇ ಆರಂಭವಾಗಿರುವ ಸಾಧನೆಗಳನ್ನು ಅಭಿವೃದ್ಧಿಪಡಿಸಲು, ಬರಹಗಾರನು ಸಲಹೆಯನ್ನು ನೀಡಿ, ಅವರ ಭವಿಷ್ಯದ ಬೆಳವಣಿಗೆಯನ್ನು ತಿಳಿಸಿರುವನು (4:1, 10). ಕಡೆಯ ಎರಡು ಅಧ್ಯಾಯಗಳು, ಕ್ರೈಸ್ತರ ಭವಿಷ್ಯದ ಪರಿಪಕ್ವತೆಗೆ ಸಲಹೆಗಳನ್ನು ನೀಡುತ್ತವೆ.

ಪಾಪಗಳು ಪ್ರಕಟಗೊಂಡು ಅವುಗಳಿಗಾಗಿ ಮಾನಸಾಂತರ ಪಡಬೇಕು. ಶೋಧನೆ ಮತ್ತು ಸುಳ್ಳು ಬೋಧನೆಗಳ ಕುರಿತು, ಮತ್ತು ಅವುಗಳ ಅಪಾಯದ ಕುರಿತು ಕ್ರೈಸ್ತರು ಅರಿಯಬೇಕು, ಹೇಗೂ ಅವುಗಳನ್ನು ಅರಿಯುವದರಿಂದ ಮತ್ತು ಪಾಪವನ್ನು ನಿರ್ಲಕ್ಷಿಸುವದರಿಂದ, ಕ್ರೈಸ್ತ ಪರಿಪಕ್ವತೆಯನ್ನು ಸಾಧಿಸಲು ಸಾಧ್ಯವಿಲ್ಲ. ಒಳ್ಳೇಯ ಜನರು ಪಾಪವನ್ನು ಬಿಟ್ಟು, ಅವರ ಜೀವಿತದಲ್ಲಿರುವ ಒಳ್ಳೇಯದನ್ನು ಅಭಿವೃದ್ಧಿಪಡಿಸುವಾಗ ನಿಜವಾದ ಬೆಳವಣಿಗೆಯನ್ನು ಕಾಣಲು ಸಾಧ್ಯವಾಗುತ್ತದೆ, ಹಾಗೂ ಅವರ ನಾಯಕನಾದ ಕ್ರಿಸ್ತ ಯೇಸುವನ್ನು ಅನುಸರಿಸುವ ಮೂಲಕ ಪರಿಪಕ್ವತೆಯು ಉಂಟಾಗುತ್ತದೆ. ನಾವು ಜನರ ಹಿಂದಿನ ಬೆಳವಣಿಗೆಯ ಕುರಿತು ಸಾಧ್ಯವಾಗುತ್ತದೆ, ಹಾಗೂ ಜನರನ್ನು ವಂದಿಸಿದ ನಂತರ, ನಾವು ಪರಿಪಕ್ವತೆಗೆ ಸಹಾಯವಾಗುವ ವಾಕ್ಯದ ಕಡೆಗೆ ಅವರನ್ನು ನಡಿಸಬಹುದು.

ಪ್ರತಿ ಕ್ರೈಸ್ತನು ಬೆಳೆಯುವಂಥ ಸಮರ್ಥ್ಯವನ್ನು ಹೊಂದಿರುವನು. ಹಲವಾರು ಬಾರಿ, ಜನರು ಬೆಳೆಯುವದಕ್ಕೆ ಪ್ರಯತ್ನಿಸುವದಿಲ್ಲ; ಬೆಳವಣಿಗೆಯ ಅಗತ್ಯತೆ ಇಲ್ಲ ಹಾಗೂ ಬೆಳೆಯುವದು ಅಸಾಧ್ಯ ಎಂದು ಅವರು ನಿರ್ಣಯಿಸಿರುತ್ತಾರೆ. ಬೋಧಕರುಗಳು ಇತರರ ಬಗ್ಗೆ ಈ ಮನೋಭಾವವನ್ನು ಹೊಂದಿರುವುದಾದರೆ, ಅವರು ಪಾಪ ಪ್ರಜ್ಞೆಯನ್ನು ಹೊಂದಿರುವವರಾಗಿರುತ್ತಾರೆ. ಒಂದು ವೇಳೆ ಇತರರ ಬಗ್ಗೆ ಈ ಮನೋಭಾವವನ್ನು ಹೊಂದಿದ್ದರೆ, ನಾವು ಅವರನ್ನು ಪರಿಪಕ್ವತೆಗೆ ನಡಿಸಲು ಅಸಾಧ್ಯವಾಗುತ್ತದೆ.

ಫಿಲಿಪ್ಪಿಯ ಕ್ರೈಸ್ತರಿಗೆ ಪೌಲನು ಬರೆದು, "ಈ ಒಳ್ಳೆ ಕೆಲಸವನ್ನು ನಿಮ್ಮಲ್ಲಿ ಪ್ರಾರಂಭಿಸಿದಾತನು ಅದನ್ನು ನಡಿಸಿಕೊಂಡು ಯೇಸು ಕ್ರಿಸ್ತನು ಬರುವ ದಿನದೊಳಗಾಗಿ ಸಿದ್ಧಿಗೆ ತರುವನೆಂದು ನನಗೆ ಭರವಸವುಂಟು" (ಫಿಲಿಪ್ಪಿ 1:6). ಇದೇ ವಿಧವಾದ ಥೆಸಲೊನೀಕದವರ ಬೆಳವಣಿಗೆಗೆ, ನಾಲ್ಕು ಬಾರಿ ಅಭಿನಂದಿಸಿ, ಅವರನ್ನು "ಅಭಿವೃದ್ಧಿಯಾಗಿ ಬೆಳವಣಿಗೆ ಹೊಂದಿ," "ಹೆಚ್ಚುತ್ತಾ," "ವೃದ್ಧಿಯಾಗಬೇಕೆಂದು" ಪ್ರೋತ್ಸಾಹಿಸಿದನು (3:12; 4:1, 10; 5:11). ಇತರ ಕ್ರೈಸ್ತರುಗಳು ಸಹ ಅವರ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವಂಥ ಭರವಸವನ್ನು ನಾವುಗಳು ಅಭಿವೃದ್ಧಿಪಡಿಸಿಕೊಳ್ಳಬೇಕು.

ನಮ್ಮೆಲ್ಲರಿಗಾಗಿ ದೇವರು ಯೋಜನೆಯನ್ನು ಇಟ್ಟಿರುವನು. ಹೊಸ ಒಡಂಬಡಿಕೆಯ ಪತ್ರಿಕೆಗಳು ಇದಕ್ಕೆ ಸಾಕ್ಷಿಯಾಗಿರುತ್ತದೆ, ನಮ್ಮ ಬೆಳವಣಿಗೆಗೆ ಈ ಪತ್ರಿಕೆಗಳು ಸಹಾಯಿಸುತ್ತವೆ. ಇತರರ ಜೀವಿತದಲ್ಲಿ ಒಳ್ಳೇ ಕ್ರೈಸ್ತತ್ವವು ಪ್ರಾರಂಭಗೊಂಡಿದೆ ಎಂಬ ಅರಿವನ್ನು ಅವರಲ್ಲಿ ತಿಳಿಸಿದ ನಂತರ, ಅವರ ಸಾಮರ್ಥ್ಯಕ್ಕನುಗುಣವಾಗಿ ನಾವುಗಳು ಕಾರ್ಯಮಾಡಲು ಆರಂಭಿಸಬೇಕು.

## ಮುಕ್ತಾಯ

ಕೆಲವು ಕ್ರೈಸ್ತರ ಜೀವಿತದಲ್ಲಿ ನಾವು ಪಾಪವನ್ನು ಕಾಣುವಾಗ, ಅವರನ್ನು ನಿಷ್ಪ್ರಯೋಜಕರು ಎಂದು ಪರಿಗಣಿಸುತ್ತೇವೆ, ಅವರ ಜೀವಿತದಲ್ಲಿರುವ ಸದ್ಗುಣಗಳನ್ನು ನಾವು ಪರಿಗಣಿಸದೆ ಹೋದರೆ ಪರಿಪಕ್ವತೆ ಇಲ್ಲದವರು ಮಾತ್ರ ಬೆಳವಣಿಗೆಯನ್ನು ಕಾಣಬಹುದು ಎಂದು ಅಪೇಕ್ಷಿಸದೆ, 1 ಥೆಸಲೊನೀಕದಿಂದ ಸಹಾಯವನ್ನು ಪಡೆಯಬಹುದು.

ಥೆಸಲೊನೀಕದವರು ತಮ್ಮ ನಾಯಕನನ್ನು ಅನುಸರಿಸುವ ಮೂಲಕ ದೊಡ್ಡ

ಕಾರ್ಯವನ್ನು ಮಾಡಿದರು - ಆ ನಾಯಕನು ಯೇಸುವೇ. ನಮ್ಮ ಕುರಿತಾಗಿ ಏನು? ಆತನನ್ನು ಅನುಸರಿಸುವದು ನಮ್ಮ ಉದ್ದೇಶವಾಗಿದೆಯೇ, ಎಲ್ಲರ ಸಲಹೆಗಳಿಗಿಂತಲೂ, ಆತನ ಸಲಹೆಯೇ ಉತ್ತಮವೆಂದೆಣಿಸಿ, ಆತನನ್ನೇ ನಮ್ಮ ದೈನಂದಿನ ಮಾದರಿಯನ್ನಾಗಿ ಮಾಡಿಕೊಂಡು ಅನುಸರಿಸಬಹುದೇ? ಥೆಸಲೊನೀಕದವರು ತಮ್ಮ ಬೋಧಕರಲ್ಲಿ ಅಡಕವಾಗಿದ್ದ, ಯೇಸುವಿನ ಮನೋಭಾವನೆಯನ್ನು ಕಂಡರು. ಅವರ ಯಜಮಾನನ್ನು ಹಿಂಬಾಲಿಸಲು, ಇದು ಅವರಿಗೆ ಸಹಾಯವಾಯಿತು. ನಮ್ಮ ಬಗ್ಗೆ ಏನು? ಇತರರಲ್ಲಿ ನಮ್ಮ ನಾಯಕನ ಸದ್ಗುಣಗಳನ್ನು ಗಮನಿಸಿ; ಅವರನ್ನು ಉತ್ತಮವಾದ ಮಾದರಿಯನ್ನಾಗಿ ಮಾಡಿಕೊಂಡು, ಅವರನ್ನು ಮೆಚ್ಚಿಕೊಂಡು; ನಾವುಗಳು ಉತ್ತಮವಾದ ಜೀವಿತವನ್ನು ಜೀವಿಸಲು ಸಾಧ್ಯವೆ, ಅಥವಾ ನಾಯಕನನ್ನು ಹಿಂಬಾಲಿಸಲು ಸಾಧ್ಯವೆ? ಅಥವಾ ಯೇಸು ಇತರರಲ್ಲಿ ಮಾತ್ರ ಒಳ್ಳೆಯ ಕಾರ್ಯವನ್ನು ಮಾಡಲಿ ಎಂದು ಬಿಟ್ಟುಕೊಡು ವೆವೇ? ಅಥವಾ ಪೌಲನಂತೆ, "ನಾನು ಕ್ರಿಸ್ತನನ್ನು ಅನುಸರಿಸುವಂತೆಯೇ, ನೀವು ನನ್ನನ್ನು ಅನುಸರಿಸುವವರಾಗಿರಿ" ಎಂದು ಹೇಳಲು ಸಾಧ್ಯವೆ (1 ಕೊರಿಂಥ 11:1)? ಅವನು ಹೇಳಿದ್ದೇ ನೆಂದರೆ, "ನೀವು ಯಾವುದನ್ನು ನನ್ನಿಂದ ಕಲಿತು ಹೊಂದಿದಿರೋ, ಮತ್ತು ಯಾವುದನ್ನು ನನ್ನಲ್ಲಿ ಕೇಳಿ ಕಂಡಿರೋ ಅದನ್ನೆ ಮಾಡುತ್ತಾ ಬನ್ನಿರಿ, ಹೀಗೆ ಮಾಡಿದರೆ, ಶಾಂತಿದಾಯಕನಾದ ದೇವರು ನಿಮ್ಮೊಂದಿಗಿರುವನು" (ಫಿಲಿಪ್ಪಿ 4:9). ನಾವು ಇದನ್ನು ಹೇಳಲಿಕ್ಕೆ ಆಗುವಂತ ಜೀವಿತವನ್ನು ಜೀವಿಸೋಣ!

ನಮ್ಮ ನಾಯಕನನ್ನು ಅನುಸರಿಸುವದರಿಂದ ಆಗುವ ಲಾಭವೇನು? ನಾವು ಆತನೊಂದಿಗೆ ಪರಲೋಕದಲ್ಲಿರುವೆವು, 1 ಥೆಸಲೊನೀಕದಲ್ಲಿ ಯೇಸುವಿನ ಬರೋಣದ ಮುಖ್ಯ ಪ್ರಸ್ತಾಪವು ಹರಿಯುತ್ತಿದೆ. ಪ್ರತಿ ಅಧ್ಯಾಯದಲ್ಲೂ ಅದರ ಕುರಿತಾಗಿ ಹೇಳಲ್ಪಟ್ಟಿದೆ (1:10; 2:19; 3:13; 4:14-17; 5:1-3, 23). ಥೆಸಲೊನೀಕದವರು ಆತನ ಬರೋಣದ ಕುರಿತಾಗಿ ಅರಿತಿರಲಿಲ್ಲವೆಂದು ತಿಳಿದು ಈ ತೀವ್ರವಾದ ಬರವಣಿಗೆಯನ್ನು ಬರೆದಿರುವದಿಲ್ಲ. ಅವರು ಭಯಪಟ್ಟು, ಅವರ ಜೀವಿತಗಳನ್ನು ಬದಲಿಸಿಕೊಳ್ಳಲಿ ಎಂಬುದಾಗಿಯೂ ಬರೆದಿರುವದಿಲ್ಲ. ಅವರು ಸಕಾರಾತ್ಮಕವಾದ ಹಾಗೂ ಪರಿಪಕ್ವತೆಯ ದೋರಣೆಯನ್ನು ಹೊಂದಲಿ ಎಂದು ಒತ್ತಿ ಹೇಳಲಾಗಿದೆ. ಅವರು ಯೇಸುವಿನಂತೆ ಆಗಿ, ಯೇಸುವಿನ ಬರೋಣವನ್ನು ಹಾರೈಸಲಿ ಎಂದು ಬರೆಯಲಾಗಿದೆ.

ಥೆಸಲೊನೀಕದವರು ಕ್ರಿಸ್ತನಲ್ಲಿ ತಮ್ಮ ಜೀವಿತವನ್ನು ವಿಶೇಷವಾಗಿ ಆರಂಭಿಸಿದ್ದರು. ಅದರಿಂದ ಅವರು ಪರಿಪಕ್ವತೆಗೆ ಸಾಗಲು ಸಾಧ್ಯವಿತ್ತು. ಕರ್ತನ ಸನ್ನಿಧಿಯಲ್ಲಿ ನಿತ್ಯತ್ವದ ಶಿಖರಕ್ಕೆ ಎರುವ ಭರವಸೆಯು ಅವರಲ್ಲಿತ್ತು!

ಯೇಸುವಿನ ಪುನರಾಗಮನದ ನೆನಪು ಅವರಿಗೆ ಭರವಸೆಯ ಮೂಲವಾಗಿತ್ತು. ಅಪೂರ್ಣವಾದ ಲೋಕದಲ್ಲಿ, ಕ್ರೈಸ್ತರು ಗ್ರಹವಾಸಿಗಳಾಗಿರಲು ಅಸಾಧ್ಯ. ಪುನರುತ್ಥಾನ ಹೊಂದಿದ ಯೇಸುವಿನಲ್ಲಿ ನಾವಿಟ್ಟಿರುವ ನಂಬಿಕೆಯ ಮೂಲಕ ಆತನ ಬರೋಣವನ್ನು ಹಾರೈ ಸುತ್ತೇವೆ, ಆತನನ್ನು ಅನುಸರಿಸಿದವರ ಸಂಗಡ ನಾವುಗಳು ಸಹ ಆತನಲ್ಲಿ ಒಂದಾಗುತ್ತೇವೆ. ಜೀವಿಸುವವರಿಗೆ ಇದು ಎಷ್ಟು ಸತ್ಯವಾಗಿದೆಯೋ, ಸತ್ತವರಿಗೂ ಸಹ ಇದು ಸತ್ಯವಾಗಿದೆ. ಯೇಸುವಿನ ಪುನರಾಗಮನಕ್ಕಿಂತಲೂ ಮೊದಲೇ ಅನೇಕರು ಸಾಯುವದಾದರೂ - ಮರಣವನ್ನು ಹೊರತುಪಡಿಸಿ, ಜೀವಿತದ ಅಂತ್ಯದ ಕುರಿತು ಒತ್ತಿ ಹೇಳಲಾಗಿದೆ. 1 ಥೆಸಲೊನೀಕ ದಲ್ಲಿ ಈಗ ಪ್ರಾರಂಭವಾಗಿರುವ ನಿತ್ಯ ಜೀವದ ಕುರಿತು ಬರೆದು ಮತ್ತು ಯೇಸುವಿನ ಬರೋಣದಲ್ಲಿ ನಿತ್ಯಕಾಲಕ್ಕು ಉಂಟಾದ ಆನಂದದ ಕುರಿತಾಗಿ ಬರೆಯಲ್ಪಟ್ಟಿದೆ. ಈ ಜೀವಿತದಲ್ಲಿ ನಾವು ನಾಯಕರಗಳನ್ನು ಹಿಂಬಾಲಿಸುತ್ತಾ ಮುಂದಿನ ಜೀವಿತಕ್ಕೆ ಸಾಗಬೇಕು! ಯೇಸುವನ್ನು ಹಿಂಬಾಲಿಸಿ ಮಹಿಮೆಯವರೆಗೂ ಸಾಗುವದರಲ್ಲಿ ಕ್ರೈಸ್ತರ ವಿಶೇಷವಾದ ಭರವಸೆಯು ಅಡಕವಾಗಿರುತ್ತದೆ!